ದಿನಾಂಕಃ 12.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

## ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎಮ್.ಆರ್.ಎಲ್. ಅವರಿಂದ-

9. ಈಗ ನನಗೆ ತೋರಿಸಿದ ಇಂಡೆಕ್ಸ್ ಆಫ್ ಲ್ಯಾಂಡ್ಸ್ ನಲ್ಲಿ 1 ನೇ ಪ್ರತಿವಾದಿಯ ಪತಿ ನನ್ನ ಅಣ್ಣ ದೊಡ್ಡಯ್ಯ ಮತ್ತು ಇನ್ನಿಬ್ಬರು ಅಣ್ಣಂದಿರಾದ ಪ್ರತಿವಾದಿ 2 ಹಾಗೂ 3 ಮತ್ತು ನನ್ನ ಹೆಸರಿಗೆ ದಾವ 1 ನೇ ಐಟಂ ಸರ್ವೇ ನಂ.246/1 ರಲ್ಲಿ ತಲಾ 34 ಗುಂಟೆ ಜಮೀನಿನ ಖಾತೆ ನಮೂದಾಗಿದೆ ಎಂದರೆ ಸರಿ ಎಂದು ನುಡಿದು, ನಾವು ಅದನ್ನೆ ಈಗ ಪ್ರಶ್ನೆ ಮಾಡುತ್ತಿರುವುದು ಎನ್ನುತ್ತಾರೆ. ಸದರಿ ಇಂಡೆಕ್ಸ್ ಆಫ್ ಲ್ಯಾಂಡ್ಸ್ ಅನ್ನು ನಿಡಿ.3 ಎಂದು ಗುರುತಿಸಲಾಯಿತು.

10. ಅದೇ ರೀತಿ **MR No**.24/2001-02 ರ ರೀತಿ ದಾವ ಸರ್ವೇ ನಂ.246/1 ಮತ್ತು 246/2 ರ ಪೈಕಿ ನಾವು ಅಣ್ಣ ತಮ್ಮಂದಿರಾದ 4 ಜನರ 1 ನೇ ಪ್ರತಿವಾದಿಯ ಗಂಡನಿಗೆ 34 ಗುಂಟೆ ಮತ್ತು ಉಳಿದ ನಾವು 3 ಜನರಿಗೆ ತಲಾ 33 ಗುಂಟೆ ಜಮೀನಿನ ಖಾತೆ ನಮೂದಾಗಿದೆ ಎಂದರೆ ಸರಿ ಎಂದು ನುಡಿದು, ನಮ್ಮ ಅನುಭವದಲ್ಲಿರುವಂತೆ ಖಾತೆ ಮಾಡಿಕೊಡಿ ಎಂದು ಕೇಳಿದ್ದರು ಕೂಡ ಈ ರೀತಿ ಮಾಡಿದ್ದಾರೆ ಎಂದೇ ನ್ಯಾಯಾಲಯಕ್ಕೆ ಬಂದಿದ್ದೇವೆ. ಸದರಿ MR ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು.

11. ಅದೇ ರೀತಿ ಸದರಿ ದಾವ ಸರ್ವೇ ನಂ.246/1 ರ ಪೈಕಿ **MR H** 69/2012-13 ರಂತೆ ನನ್ನ ಅಣ್ಣ ದೊಡ್ಡಯ್ಯನವರ ಹಿಸ್ಸೆಗೆ ಹೋಗಿದ್ದ 34 ಗುಂಟೆಯ ಖಾತೆ ಅವರ ಮರಣಾನಂತರ 1 ನೇ ಪ್ರತಿವಾದಿಗೆ ಪೌತಿ ಖಾತೆ ಆಗಿದೆ ಎಂದರೆ ಆ ರೀತಿ ಮಾಡಿಸಿಕೊಂಡಿರುವುದು ನಮಗೆ ಗೊತ್ತಿಲ್ಲ. ಸದರಿ ಖಾತೆ ವಿರುದ್ಧ ನಾನು ಹಾಗೂ 2, 3 ನೇ ಪ್ರತಿವಾದಿಗಳು ಎ.ಸಿ. ಅವರ ನ್ಯಾಯಾಲಯದಲ್ಲಿ **RA**199/21 ರಂತೆ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ಸರಿ. ಸದರಿ ಮೇಲ್ಮನವಿ ಮಾನ್ಯ ಮಾಡಲು ಬರುವುದಿಲ್ಲ, ನೀವು

ಸಿವಿಲ್ ನ್ಯಾಯಾಲಯಕ್ಕೆ ಹೋಗಬೇಕು ಎಂದು ವಜಾ ಆಯಿತು ಎಂದರೆ ಸರಿ. **ಸದರಿ MR ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು.**

12. ನನ್ನ ವಾದಪತ್ರದ 6,7,8 ಮತ್ತು ಮುಖ್ಯವಿಚಾರಣೆಯ 10 ನೇ ಪ್ಯಾರಾದಲ್ಲಿ ಹೇಳಿರುವಂತೆ ದಾವ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ನಾನು ಆರ್.ಟಿ.ಸಿ ಹಾಜರುಪಡಿಸಿರುತ್ತೇನೆ. ಆದರೆ ಇಂತಹುದೇ ಚೆಕ್ಕುಬಂದಿಯಲ್ಲಿ ನಾನು ಇದ್ದೇನೆ ಎಂದು ತೋರಿಸಲು ದಾಖಲಾತಿ ಇರುವುದಿಲ್ಲ.

13. ಅದೇ ರೀತಿ ಸದರಿ ದಾವ ಸರ್ವೇ ನಂ.246/2 ರ ಪೈಕಿ **MR H** 85/2012-13 ರಂತೆ ನನ್ನ ಅಣ್ಣ ದೊಡ್ಡಯ್ಯನವರ ಹಿಸ್ಸೆಗೆ ಹೋಗಿದ್ದ 34 ಗುಂಟೆಯ ಖಾತೆ ಅವರ ಮರಣಾನಂತರ 1 ನೇ ಪ್ರತಿವಾದಿಗೆ ಪೌತಿ ಖಾತೆ ಆಗಿದೆ ಎಂದರೆ ಸರಿ, ಆ ರೀತಿ ಮಾಡಿಸಿಕೊಂಡಿರುವುದು ನಮಗೆ ಗೊತ್ತಿಲ್ಲ. **ಸದರಿ MR ದಾಖಲೆಯನ್ನು ನಿಡಿ.6 ಎಂದು ಗುರುತಿಸಲಾಯಿತು.**

**<u>ಮುಂದುವರಿದ ಪಾಟೀಸವಾಲು: ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.